ಶ್ರೀ ಎಸ್. ಆರ್. ಕಂಠಿ.—ಈಗ ಇರುವ ಜಾಗದಲ್ಲೇ ಅಡ್‌ಜಸ್ಟ್ ಮಾಡಲಾಗಿದೆ. ಹೆಚ್ಚು ಸ್ಥಳಾವಕಾಶಮಾಡಲು ಪ್ಲಾನು ಮತ್ತು ಅಂದಾಜು ಬಂದಿದೆ, ಪರಿಶೀಲನೆಮಾಡಲಾಗುವುದು.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಬೆಂಗಳೂರಿನಲ್ಲಿ ಬಹಳವಾಗಿ ಕೋರ್ಟುಗಳೇನಿವೆ ಅವುಗಳಿಗೆ ಸ್ಥಳವಿಲ್ಲ, ರಾಯರುಗಳು ಕುಳಿತುಕೊಳ್ಳುವುದಕ್ಕೆ ಸ್ಥಳವಿಲ್ಲ ಎಂದು ಹೇಳುತ್ತಿರುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ. ಸಾಧ್ಯವಾದಷ್ಟು ಸ್ಥಳಾವಕಾಶ ಮಾಡಲು ಪ್ರಯತ್ನಮಾಡಲಾಗುತ್ತಿದೆ.

ಶ್ರೀ ಜಿ. ವಿ. ಆಂಜನಪ್ಪ.—ಎಷ್ಟು ಕಾಲದಲ್ಲಿ ಕಟ್ಟಡಗಳನ್ನು ಕಟ್ಟಲಾಗುವುದು ? ಅಂದಾಜು ಎಷ್ಟಕ್ಕೆ ಆಗಿದೆ ?

ಶ್ರೀ ಎಸ್. ಆರ್. ಕಂಠಿ.—ವರ್ಷಕ್ಕೆ ಈ ಕಟ್ಟಡಗಳಿಗಾಗಿ 15 ಲಕ್ಷ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಒದಗಿಸಲಾಗಿದೆ. ಅದಕ್ಕೆ ತಕ್ಕಂತೆ ಕಾರ್ಯಕ್ರಮವಿದೆ. ಹಾಸನ, ಚಿಕ್ಕಮಗಳೂರು ಮುಂತಾದ ಕಡೆ ಕೆಲಸವಾಗಿದೆ. ಉಳಿದ ಕಡೆಗಳಲ್ಲೂ ಕ್ರಮ ಕೈಕೊಳ್ಳಲಾಗುವುದು.

ಶ್ರೀ ಜಿ. ವಿ. ಆಂಜನಪ್ಪ.—ಕುಂದಾಪುರವಲ್ಲಿ ಎಷ್ಟು ಕಾಲದಲ್ಲಿ ಕಟ್ಟಡ ಕಟ್ಟಿಸಬೇಕೆಂದಿದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಹಣ ದೊರೆತಂತೆ ಕಟ್ಟಡದ ಕೆಲಸ ತೆಗೆದುಕೊಳ್ಳಬೇಕಾಗುತ್ತದೆ. ಇಂಥ ಪ್ರಶ್ನೆ ನಮ್ಮ ರಾಜ್ಯದಲ್ಲಿ ಬಹಳ ಇದೆ.

Zilla Parishad in the State

23. Sri S. G. KHELGI (Local Authorities' Constituency).—

Will the Minister for Development and Co-operation be pleased to state :—

(*a*) whether Government intend to introduce Zilla Parishad in the State, as it has been done in Maharashtra State;

(*b*) if so, since when ?

A.—Sri P. M. NADGOUDA (Minister for Development and Co-operation).—

(*a*) No.

(*b*) Does not arise in view of reply to Clause (*a*) above.

ಶ್ರೀ ಎಸ್. ಜಿ. ಖೆಲ್ಗಿ.—ಈ ಸಂಬಂಧದಲ್ಲಿ ಕೊಂಡಜ್ಜಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿತ್ತು, ಸೆರೆಕ್ಟ್ ಕಮಿಟಿ ವರದಿ ಸಹ ಬಂತು ಎಂಬುದು ಗಮನಕ್ಕೆ ಬಂದಿದೆಯೆ ? ?

† ಶ್ರೀ ಪಿ. ಎಂ. ನಾಡಗೌಡ.—1964 ರಲ್ಲಿ ಜಾಯಿಂಟ್ ಸೆರೆಕ್ಟ್ ಕಮಿಟಿಯು ವರದಿ ಬಂತು. ರಾಜ್ಯಪಾಲರು ಎರಡು ಸಭೆಗಳನ್ನೂ ಡಿಸಾಲ್ವ್ ಮಾಡಿದಾಗ ಸಂಬಂಧಪಟ್ಟ ಬಿಲ್ಲು ರ್ಯಾವ್ಸ್ ಆಯಿತು. ಅದಾದಮೇಲೆ ಸರಕಾರ ಪುನಃ ಈ ಬಗ್ಗೆ ವಿಚಾರಮಾಡುತ್ತಿದೆ.

Sri M. P. L. SASTRY.—Is it still the policy of the Government of Mysore that there should be three tier system as far as local administration is concerned *viz.*, the Village Panchayat Taluk and Zilla Parishad level ?

Sri P. M. NADGOUDA.—Yes.

Sri M. P. L. SASTRY.—How long will it take to have an Act made in this behalf and have elections in the Zilla Parishads under the new scheme ?

2-45 P.M.

ಶ್ರೀ ಪಿ. ಎಂ. ನಾಡಗೌಡ.—ಅವಕಾಶ ಸಿಕ್ಕಿದರೆ ಈ ಅಧಿವೇಶನದಲ್ಲೇ ಈ ಸಂಬಂಧವಾದ ಬಿಲ್ಲನ್ನು ಪರಿಶೀಲನೆಗಾಗುವುದು. ಮಾನ್ಯ ವಿರೋಧ ಪಕ್ಷದ ಸದಸ್ಯರು ಸಹಕರಿಸಿದರೆ ಈ ಬಿಲ್ಲನ್ನು ಶೀಘ್ರದಲ್ಲೇ ತರಲಾಗುವುದು.

ಶ್ರೀ ಜಿ. ವಿ. ಆಂಜನಪ್ಪ.—ವಿರೋಧ ಪಕ್ಷದ ಸದಸ್ಯರಿಂದ ಈ ಕೆಲಸಕ್ಕೆ ಅಡ್ಡಿಯಾಗಿದೆ ಎಂಬುದು ಸರಕಾರ ಭಾವನೆಯೇ ?

ಶ್ರೀ ಪಿ. ಎಂ. ನಾಡಗೌಡ.—ಇದುವರೆಗೆ ಕೆಲವು ಅಡಚಣೆಗಳಿಂದ ತಡವಾಯ್ತು. ಒಂದು ವರ್ಷದಿಂದ ಜಾಗ್ರತೆ ತರಬೇಕೆಂದು ಸರಕಾರ ಪ್ರಯತ್ನಪಟ್ಟರೂ ಕೆಳಮನೆಯಲ್ಲಿ ಗಂಡಾಂತರವಾಗಿ ಕನ್‌ಫ್ಯೂಷನ್ ಆಗಿ ತರಲು ಇದುವರೆಗೆ ಅವಕಾಶವಾಗಲಿಲ್ಲ.

ಶ್ರೀ ಸಿ. ಎನ್. ಬಾಲಕೃಷ್ಣಗೌಡ.—ಮಾನ್ಯ ಮಂತ್ರಿಗಳು ವಿರೋಧ ಪಕ್ಷದ ಬಗ್ಗೆ ಆಪಾದಿಸಿದ್ದು ಸತ್ಯಕ್ಕೆ ದೂರವಾದುದು ಎಂದು ವಿಷಾದದಿಂದ ಹೇಳಬೇಕಾಗಿದೆ. ಅಡ್ಡಿ ಆತಂಕ ಕಾನೂನು ಬದ್ಧವಾಗಿ ಮಾಡಲು ಅವಕಾಶವಿದೆ. ರಾಜ್ಯಪಾಲರ ಭಾಷಣದಲ್ಲಿ ಈ ಅಧಿವೇಶನದಲ್ಲಿ ತಗೆದುಕೊಳ್ಳುವುದಾಗಿ ಹೇಳಿರುವ ಬಿಲ್ಲುಗಳ ಪಟ್ಟಿಯಲ್ಲಿ ಮಾನ್ಯ ಮಂತ್ರಿಗಳು ಹೇಳುವ ಬಿಲ್ಲು ಸೇರಿಲ್ಲ. ಇದು ಮುಖ್ಯವಾದುದಾದ್ದರಿಂದ ಇದನ್ನು ಸ್ಪಷ್ಟವಾಗಿ ನಮೂದಿಸಬೇಕಾಗಿತ್ತು. ಇದಕ್ಕೆ ಪ್ರಾಶಸ್ತ್ಯ ಕೊಡಬೇಕಾಗಿತ್ತು. ಆದರೆ ಕೆಲವು ಸಣ್ಣಪುಟ್ಟ ಕಾನೂನುಗಳು ಮಾತ್ರ ರಾಜ್ಯಪಾಲರ ಭಾಷಣದಲ್ಲಿ ನಮೂದಾಗಿವೆ. ಇದನ್ನು ನೋಡಿದರೆ ನಿಜವಾಗಿಯೂ ಕೂಡ ಈ ಕಾನೂನನ್ನು ಈ ಅಧಿವೇಶನದಲ್ಲಿ ತರಲು ಸರಕಾರಕ್ಕೆ ಮನಸ್ಸಿದೆಯೇ ಎಂಬ ಅನುಮಾನ ಬರುತ್ತದೆ.

ಶ್ರೀ ಪಿ. ಎಂ. ನಾಡಗೌಡ —ಮಾನ್ಯ ಸದಸ್ಯರು ಸಹಕಾರಮಾಡಿದರೆ ಸರಕಾರ ಈ ಸಂಬಂಧವಾದ ಕಾನೂನನ್ನು ಈ ಅಧಿವೇಶನದಲ್ಲೇ ತರಲು ತಯಾರಾಗಿದ್ದಾರೆ. ಹೋದ ವರ್ಷವೇ ರಾಜ್ಯಪಾಲರ ಭಾಷಣದಲ್ಲಿ ನಮೂದಾಗಿ ರ್ಯಾಪ್ತಾಗಿದೆ.

ಶ್ರೀ ಜಿ. ವಿ. ಆಂಜನಪ್ಪ.—ಸರಕಾರಕ್ಕೆ ನಿಜವಾಗಿಯೂ ಬಿಲ್ಲನ್ನು ತರಬೇಕೆಂಬ ಮನಸ್ಸಿಲ್ಲದಿರುವುದರಿಂದ ವಿಳಂಬಕ್ಕೆ ಕಾರಣವಾಗಿಹೆಯಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಅದು ಹಾಗಲ್ಲ. ಮಾನ್ಯ ಸದಸ್ಯರು ಸಹಕಾರಮಾಡಿದರೆ ತರಲು ಸರಕಾರಕ್ಕೆ ಇಚ್ಛೆಯಿದೆ.

ಶ್ರೀ ಎಂ. ವಿ. ವೆಂಕಟಪ್ಪ.—ಒಟ್ಟಿನಲ್ಲಿ ಇದಕ್ಕೆ ಸಂಬಂಧಪಟ್ಟ ಚುನಾವಣೆ ಯಾವಾಗ ಮುಗಿಯುವುದು ?

ಶ್ರೀ ಪಿ. ಎಂ. ನಾಡಗೌಡ.—ಈಗ ಪಂಚಾಯಿತಿ ಚುನಾವಣೆಯಿದೆ, ತಾಲ್ಲೂಕು ಬೋರ್ಡುಗಳ ಚುನಾವಣೆಯಾಗಬೇಕು, ಕಾಯಿದೆ ತರಬೇಕು, ಪರಿಶೀಲಿಸಿ ಶೀಘ್ರವಾಗಿ ತರುತ್ತೇವೆ.

ಶ್ರೀ ಎಂ. ಲಿಂಗಣ್ಣ.—ಹೊಸ ಕಾಯಿದೆಯ ಪ್ರಕಾರ ಹೊಸ ಚುನಾವಣೆ ನಡೆಸ ಬೇಕೆಂದಿದ್ದೀರೋ ಅಥವಾ ಹಳೆಯ ಕಾಯಿದೆಯ ಪ್ರಕಾರ ಹೊಸ ಚುನಾವಣೆ ನಡೆಸಬೇಕೆಂದಿದ್ದೀರೊ ?

ಶ್ರೀ ಪಿ. ಎಂ. ನಾಡಗೌಡ.—ಅದನ್ನು ಸರಕಾರ ಪರಿಶೀಲಿಸುತ್ತಿದೆ.

Sri M. LINGANNA.—May I know whether the elections will be done at least under the old Act ?

ಶ್ರೀ ಪಿ. ಎಂ. ನಾಡಗೌಡ.—ಎರಡನ್ನೂ ವಿಚಾರಮಾಡುತ್ತೇವೆ.

SHORT NOTICE QUESTION AND ANSWER

Assistance to the Mysore Hindi Prachar Parishat

2. Sri J. B. MALLARADHYA (Legislative Assembly Constituency).—

Will the Minister for Agriculture and Education be pleased to state :—

(*a*) whether the Mysore Hindi Prachar Parishat, Bangalore receives any financial assistance from Government and if it is subject to the control of the Department of Public Instruction ;